# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯನ್ನು 2017-18ನೇ ಸಾಲಿನಿಂದ ಜಾರಿಗೆ ತರಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/163/ಪಂವಾಯೋ(1)/2016, ದಿನಾಂಕ: 07-04-2017.

******

## ಪ್ರಸ್ತಾವನೆ:

ರಾಜ್ಯ ಸರ್ಕಾರವು 2017-18 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-63 ರಲ್ಲಿ "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ರಾಜ್ಯಾದ್ಯಂತ ಇರುವ ಪ್ರಮುಖ ಕೆರೆಗಳಲ್ಲಿ 2,500 ಹೆಕ್ಟೇರ್ ಪ್ರದೇಶದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನುಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲು ಪ್ರಸ್ತಾಪಿಸಿದೆ. ಇದಕ್ಕಾಗಿ 6.75 ಕೋಟಿ ರೂ.ಗಳನ್ನು ನೀಡಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, ರಾಜ್ಯವು ಒಟ್ಟು 5.60 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣದ ಒಳನಾಡು ಜಲಸಂಪನ್ಮೂಲ ಹೊಂದಿದ್ದು, ಈ ಸಂಪನ್ಮೂಲಗಳು ಮೀನು ಉತ್ಪಾದನೆಗೆ ವಿಫುಲ ಅವಕಾಶವನ್ನು ಒದಗಿಸಿವೆ. ಒಳನಾಡು ಜಲಸಂಪನ್ಮೂಲಗಳು ಪೂರ್ಣ ತುಂಬಿದಲ್ಲಿ ಈ ಸಂಪನ್ಮೂಲಗಳಿಂದ ವಾರ್ಷಿಕ ಸುಮಾರು 4.00 ಲಕ್ಷ ಮೆಟ್ರಿಕ್ ಟನ್ ಮೀನು ಉತ್ಪಾದಿಸಬಹುದಾಗಿರುತ್ತದೆ. ರಾಜ್ಯದ 3799 ದೊಡ್ಡ ಕೆರೆಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯು ಮೀನುಗಾರಿಕೆ ಇಲಾಖೆ ಅಧೀನದಲ್ಲಿದ್ದು, ಪ್ರತಿ ವರ್ಷ ಸುಮಾರು 3000 ಕೆರೆಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ / ಟೆಂಡರ್-ಕಂ-ಹರಾಜು ಮೂಲಕ ವಿಲೇ ಮಾಡಿ ಮೀನುಗಾರಿಕೆ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ. ಗುತ್ತಿಗೆ ಪಡೆದ ಮೀನು ಕೃಷಿಕರು ಅರೆ ತೀವ್ರ ಕೃಷಿ ಕೈಗೊಳ್ಳಲು ಉತ್ತೇಜಿಸುವ ಉದ್ದೇಶದಿಂದ 2017-18ನೇ ಸಾಲಿನಲ್ಲಿ ಕೆರೆಗಳಲ್ಲಿ ಅರೆ ತೀವ್ರ ಮೀನು ಕೃಷಿಗೆ ಪ್ರೋತ್ಸಾಹ ನೀಡಲು "ಮತ್ಸ್ಯ ಕೃಷಿ ಆಶಾಕಿರಣ" ಎಂಬ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸಲು ಹಾಗೂ ಸದರಿ ಯೋಜನೆಯಡಿ ಪ್ರತಿ ಹೆಕ್ಟೇರ್ ಉಪಯುಕ್ತ ಜಲವಿಸ್ತೀರ್ಣಕ್ಕೆ 4000 ಬಲಿತ ಮೀನುಮರಿ ಬಿತ್ತನೆ ಹಾಗೂ ಕೃತಕ ಆಹಾರ (2 ಟನ್‌ಗಳು) ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಠ ರೂ.27,000 ಪ್ರತಿ ಹೆಕ್ಟೇರ್‌ಗೆ ನೀಡಿ ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ.

2017-18 ನೇ ಸಾಲಿನಲ್ಲಿ ಪ್ರಾರಂಭಿಕವಾಗಿ ರಾಜ್ಯದ 2500 ಹೆಕ್ಟೇರ್ ಪ್ರದೇಶದಲ್ಲಿ ಈ ಕಾರ್ಯಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಇದಕ್ಕಾಗಿ ರೂ.675.00 ಲಕ್ಷಗಳ ಅನುದಾನ ಅವಶ್ಯವಾಗಿದ್ದು, 2017-18 ನೇ ಸಾಲಿನ ಆಯವ್ಯಯದಲ್ಲಿ ರೂ.675.00 ಲಕ್ಷಗಳ ಅನುದಾನ ಅವಕಾಶ ಮಾಡಲಾಗಿದೆ. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ "ಮತ್ಸ್ಯ ಕೃಷಿ ಆಶಾಕಿರಣ" ಎಂಬ ಹೊಸ ಕಾರ್ಯಕ್ರಮವನ್ನು "ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ" ಎಂಬ ಯೋಜನೆಯಡಿ ಅನುಬಂಧದಲ್ಲಿ ನೀಡಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ: ಪಸಂಮೀ 67 ಮೀಇಯೋ 2017, ಬೆಂಗಳೂರು ದಿನಾಂಕ: 10-05-2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-63 ರಲ್ಲಿನ ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ರಾಜ್ಯಾದ್ಯಂತ ಇರುವ ಪ್ರಮುಖ ಕೆರೆಗಳಲ್ಲಿ 2,500 ಹೆಕ್ಟೇರ್ ಪ್ರದೇಶದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನುಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲು ಪ್ರಸ್ತಾಪಿಸಿದ್ದು, ಅರೆ ತೀವ್ರ ಮೀನು ಕೃಷಿ ಮಾಡುವವರಿಗೆ ಅನುಕೂಲ ವಾಗುವ ದೃಷ್ಟಿಯಿಂದ, ಈ ಹೊಸ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಅಗತ್ಯವಿರುವ ರೂ.675.00 ಲಕ್ಷ (ಆರುನೂರ ಎಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯ ಲೆಕ್ಕ ಶೀರ್ಷಿಕೆ 2405-00-101-0-03 ರಡಿಯಲ್ಲಿ ಲಭ್ಯವಿರುವ ಅನುದಾನದ ಮಿತಿಯಲ್ಲಿ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ/32/ಪಿಎಫ್‌ಒ/2017, ದಿನಾಂಕ: 25-04-2017 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/319/ವೆಚ್ಚ-4/2017, ದಿನಾಂಕ: 05-05-2017 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/5/17

(ರಶ್ಮಿ ಶಿವಶಂಕರ ಪೋಳ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
TCK 10.5.17 (ಮೀನುಗಾರಿಕೆ)

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

-3-

2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.

ಆದೇಶ ಸಂಖ್ಯೆ: ಪಸಂಮೀ 67 ಮೀಇಯೋ 2017, ಬೆಂಗಳೂರು ದಿನಾಂಕ: 10-05-2017 ರ

## ಅನುಬಂಧ

## "ಮತ್ಸ್ಯ ಕೃಷಿ ಆಶಾ ಕಿರಣ'' ಯೋಜನೆಯ ಸಹಾಯಧನ ಮಂಜೂರಾತಿಗಾಗಿ ಪಾಲಿಸಬೇಕಾದ

## ಷರತ್ತು ಮತ್ತು ನಿಬಂಧನೆಗಳು

1. ಈ ಯೋಜನೆಯಡಿ ಸಹಾಯಧನ ಪಡೆಯಲು ಫಲಾನುಭವಿಯು (ವ್ಯಕ್ತಿ/ಸಂಘ) ಇಲಾಖಾ ವ್ಯಾಪ್ತಿಗೆ ಒಳಪಡುವ ಪೂರ್ಣಕಾಲಿಕ/ದೀರ್ಘಕಾಲಿಕ ಕೆರೆಯ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಮೂಲಕ ಪಡೆದಿರತಕ್ಕದ್ದು. ಕೆರೆಯು ವರ್ಷದ ಕನಿಷ್ಠ 8 ತಿಂಗಳುಗಳ ಕಾಲ 5 ಅಡಿಗಿಂತ ಹೆಚ್ಚು ನೀರಿನ ಮಟ್ಟ ಹೊಂದಿರಬೇಕು. ಜಲ ವಿಸ್ತೀರ್ಣದ ಶೇ.50ರಷ್ಟು ಭಾಗವನ್ನು ಉಪಯುಕ್ತ ಜಲವಿಸ್ತೀರ್ಣ ಎಂದು ಪರಿಗಣಿಸುವುದು. ಗರಿಷ್ಠ 50 ಹೆಕ್ಟೇರ್ ಉಪಯುಕ್ತ ಜಲ ವಿಸ್ತೀರ್ಣ ಹೊಂದಿರುವ ಕೆರೆಗಳನ್ನು ಆಯ್ಕೆ ಮಾಡಬಹುದಾಗಿದೆ.

2. ಈ ಯೋಜನೆಯಡಿ ನೀಡುವ ಸಹಾಯಧನವು ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಬಲಿತ ಬಿತ್ತನೆ ಮೀನುಮರಿಗಳಿಗೆ ರೂ.4000/- ಕೃತಕ (ಪೆಲೆಟೆಡ್) ಆಹಾರ ಖರೀದಿಗೆ ರೂ.50,000/- ಒಟ್ಟು ರೂ.54,000/- ಹೂಡಿಕೆ ವೆಚ್ಚ ಪರಿಗಣಿಸಿ ಅದರ ಶೇ.50 ರಷ್ಟು ಅಂದರೆ ರೂ.27,000/- ಪ್ರತಿ ಹೆ. ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಸಹಾಯಧನವನ್ನಾಗಿ 4 ಕಂತುಗಳಲ್ಲಿ ನೀಡತಕ್ಕದ್ದು.

3. ಸದರಿ ಫಲಾನುಭವಿಯು ಸಹಾಯಧನ ಅರ್ಜಿ ಸಲ್ಲಿಸುವ ವರ್ಷದಲ್ಲಿ ಆ ವರ್ಷದ ಗುತ್ತಿಗೆ / ಬಿಡ್ ಮೊತ್ತವನ್ನು ಇಲಾಖೆಗೆ ಪಾವತಿಸತಕ್ಕದ್ದು.

4. ಗುತ್ತಿಗೆ ಅವಧಿಯು ಕನಿಷ್ಠ 2 ವರ್ಷಗಳು ಬಾಕಿಯಿರತಕ್ಕದ್ದು.

5. ಮೀನುಗಾರಿಕೆ ನಿರ್ದೇಶನಾಲಯದಿಂದ ಅನುಮೋದಿತ ಅಧಿಕೃತ ಮೀನುಮರಿ ಸರಬರಾಜುದಾರರು ಹಾಗೂ ಮೀನು ಆಹಾರ ಸರಬರಾಜುದಾರರಿಂದ ಹೂಡಿಕೆಗಳನ್ನು ಖರೀದಿಸತಕ್ಕದ್ದು, ಖರೀದಿಸಿದ ವಿವಿಧ ಜಾತಿಯ ಬಲಿತ ಮೀನುಮರಿಗಳನ್ನು ಸ್ಥಳೀಯ ಅಧಿಕಾರಿಯ ಸಮ್ಮುಖದಲ್ಲಿ ದಾಸ್ತಾನು ಮಾಡಿ ದಾಸ್ತಾನು ಮಾಡುವ ಫೋಟೋ ಹಾಗೂ ಮೀನು ಆಹಾರ ಖರೀದಿಸಿ ದಾಸ್ತಾನಿಸಿರುವ ಫೋಟೋ ಕಡ್ಡಾಯವಾಗಿ ಅನುಬಂಧ-3 ರೊಂದಿಗೆ ಒದಗಿಸತಕ್ಕದ್ದು.

6. ಮೀ.ಸ.ಸಂ. / ಫಲಾನುಭವಿಗಳು ಮೀನು ಆಹಾರ ಹೂಡಿಕೆ ಮಾಡಲು ಸಶಕ್ತರೆಂದು ತಿಳಿಯಲು ಅವರ ಬ್ಯಾಂಕ್ ಖಾತೆಯ ವಹಿವಾಟು ದೃಢೀಕರಣ (Account Statement) ನೀಡುವುದು.

7. ಸಾರ್ವಜನಿಕರು ಕುಡಿಯುವ ನೀರಿನ ಕೆರೆಗಳನ್ನು ಸದ್ರಿ ಯೋಜನೆಯಡಿ ಆಯ್ಕೆ ಮಾಡುವಂತಿಲ್ಲ.

8. ಸಂಸ್ಕರಿಸದ ಕೊಳಚೆ ನೀರು ಸೇರುವ ಕೆರೆಗಳನ್ನು ಈ ಯೋಜನೆಗಳಡಿ ಆಯ್ಕೆ ಮಾಡುವಂತಿಲ್ಲ.

9. ಒಟ್ಟು ಯೋಜನಾ ವೆಚ್ಚದಲ್ಲಿ ಸಹಾಯಧನ ಹೊರತುಪಡಿಸಿ ಉಳಿಯುವ ಶೇ.50ರಷ್ಟು ವೆಚ್ಚವನ್ನು ಫಲಾನುಭವಿಯು ಭರಿಸತಕ್ಕದ್ದು. ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಂಪನ್ಮೂಲ ಲಭ್ಯವಿರುವ ಬಗ್ಗೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು.

10. ಸಹಾಯಧನ ಪಡೆಯಲು ಫಲಾನುಭವಿಯು ಒಮ್ಮೆ ಮಾತ್ರ ಅರ್ಹರಾಗಿರುತ್ತಾರೆ.

## ಸಹಾಯಧನ ಮಂಜೂರು ಮಾಡುವ ಕಾರ್ಯವಿಧಾನ

1) ಇಲಾಖಾಧಿಕಾರಿಗಳು ವ್ಯಾಪಕ ಪ್ರಚಾರ ನೀಡಿ, ಅರ್ಜಿಯನ್ನು ಆಹ್ವಾನಿಸುವುದು.

2) ಮೀನು ಕೃಷಿಕರು ತಮ್ಮ ಕೆರೆಗಳಲ್ಲಿ ಅರೆ ತೀವ್ರ ಮಾದರಿ ಪಾಲನೆ ಕೈಗೊಳ್ಳಲು ಆಸಕ್ತಿ ಇರುವ ಬಗ್ಗೆ ಇಚ್ಛೆ ವ್ಯಕ್ತಪಡಿಸಿ, ಸಂಬಂಧಿಸಿದ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ರವರಿಗೆ ಅನುಬಂಧ-1 ರಲ್ಲಿ ಅರ್ಜಿ ನೀಡುವುದು.

3) ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರು ಅರ್ಜಿ ಮತ್ತು ದಾಖಲಾತಿಗಳನ್ನು ಹಾಗೂ ಕೆರೆಯನ್ನು ಪರಿಶೀಲಿಸಿ ಅರೆ ತೀವ್ರ ಮೀನು ಕೃಷಿಗೆ ಸೂಕ್ತವೆಂದು ಕಂಡುಬಂದಲ್ಲಿ, ಅರ್ಜಿಯನ್ನು ಶಿಫಾರಸ್ಸು ಮಾಡುವುದು. ವಲಯದ ಮೀನುಗಾರಿಕೆ ಉಪ ನಿರ್ದೇಶಕರು, ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಮತ್ತು ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನೊಳಗೊಂಡ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು. ಜಿಲ್ಲಾಮಟ್ಟದ ಅಧಿಕಾರಿಯು ಅನುಬಂಧ-2 ರಲ್ಲಿ ಅನುಮತಿ ನೀಡತಕ್ಕದು. ಚಿಕ್ಕ ಕೆರೆಗಳಿಗೆ ಆದ್ಯತೆ ನೀಡುವುದು. ನಿಗದಿಪಡಿಸಿದ ಗುರಿಗಿಂತ ಜಾಸ್ತಿ ಅರ್ಹ ಅರ್ಜಿದಾರರು ಇದ್ದಲ್ಲಿ, ಫಲಾನುಭವಿಗಳ ಸಮ್ಮುಖದಲ್ಲಿ ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಹಾಗೂ ಒಂದು ತಿಂಗಳ ಒಳಗೆ ಮೀನುಮರಿ, ಕೃತಕ ಆಹಾರ ಖರೀದಿಸಿ ಮೂಲ ಬಿಲ್ಲುಗಳನ್ನು ಅನುಬಂಧ-3 ರಲ್ಲಿ ಮಾಹಿತಿಯನ್ನು ಸಲ್ಲಿಸುವುದು.

4) ಫಲಾನುಭವಿಯು ಅರೆ ತೀವ್ರ ಪಾಲನೆ ಕೈಗೊಂಡು ಹೂಡಿಕೆ ಮಾಡಿದ ಬಗ್ಗೆ ಅನುಬಂಧ-3 ರಲ್ಲಿ ಸೂಕ್ತ ದಾಖಲೆಗಳೊಂದಿಗೆ ಸಹಾಯಧನ ಮಂಜೂರಾತಿಗೆ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು, ಅನುಬಂಧ-3 ರ ಮಾಹಿತಿ ಯನ್ನು ಭೌತಿಕವಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ರವರು ಪರಿಶೀಲಿಸಿ, ವಿವರಗಳು ಸರಿಯಿರುವ ಬಗ್ಗೆ ದೃಡೀಕರಿಸುವುದು. ಹಾಗೂ ಸಹಾಯಧನ ಮಂಜೂರಾತಿಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗೆ ಅನುಬಂಧ-3 ರಲ್ಲಿ ಸಲ್ಲಿಸುವುದು.

5) ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರಿಯು ಆಯಾ ವಲಯ ಮಟ್ಟದ ಮೀನುಗಾರಿಕೆ ಅಧಿಕಾರಿಗೆ ಪ್ರದತ್ತವಾಗಿರುತ್ತದೆ.

6) ಮಂಜೂರಾತಿ ಆದನಂತರ ಸಹಾಯಧನವನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಜಿಲ್ಲಾ ಮಟ್ಟದ ಅಧಿಕಾರಿಗಳ ಮೇಲುರುಜು ವಿನೊಂದಿಗೆ ನಿಯಮಾನುಸಾರ ಪೇಯಿಸ್ ರಸೀದಿ / ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದು ಫಲಾನುಭವಿಯ ಖಾತೆಗೆ ಜಮಾ ಮಾಡತಕ್ಕದ್ದು.

7) ಫಲಾನುಭವಿಯು ಕೆರೆಯಲ್ಲಿ ಬಿತ್ತನೆ ಮಾಡಿದ ಮೀನಿನ ಜಾತಿವಾರು ಪ್ರಮಾಣ, ದಿನಾಂಕ, ವೆಚ್ಚ, ಆಹಾರ ನೀಡಿದ ವಿವರ, ಒಟ್ಟು ವೆಚ್ಚ, ಮೀನು ಹಿಡುವಳಿ (ಜಾತಿ ಮತ್ತು ಗಾತ್ರವಾರು) ಪ್ರಮಾಣ ಇವುಗಳನ್ನು ನೋಂದಣಿ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಇಲಾಖೆಗೆ ಪ್ರತಿ 2 ತಿಂಗಳಿಗೊಮ್ಮೆ ಮಾಹಿತಿ ನೀಡುವುದು.

8) ಫಲಾನುಭವಿಯು ಮೇಲಿನ ಷರತ್ತಿಗೆ ಒಪ್ಪಿ ಕೆರೆ ಅಭಿವೃದ್ಧಿಪಡಿಸುವ ಬಗ್ಗೆ 200 ರೂ. ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರವನ್ನು ನೀಡುವುದು.

9) ಫಲಾನುಭವಿಯು ಸಂಪೂರ್ಣ ಮಾಹಿತಿ ನೀಡದಿದ್ದರೆ, ನಿಯಮಾನುಸಾರ ಅನುಷ್ಠಾನಗೊಳಿಸದಿದ್ದರೆ ಕೆರೆ ಗುತ್ತಿಗೆಯನ್ನು ರದ್ದುಪಡಿಸಲು ಇಲಾಖೆಯಿಂದ ಕ್ರಮ ಕೈಗೊಳ್ಳತಕ್ಕದ್ದು.

10/5/17

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
TCK 10.5.17 (ಮೀನುಗಾರಿಕೆ)

## ಕರ್ನಾಟಕ ಸರ್ಕಾರ
## (ಮೀನುಗಾರಿಕೆ ಇಲಾಖೆ)
## "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆ ಸಹಾಯಧನಕ್ಕೆ ಅರ್ಜಿ
## ಅನುಬಂಧ-1

| | | |
|---|---|---|
| 1. | ಅರ್ಜಿದಾರರ ಹೆಸರು ಮತ್ತು ಆಧಾರ ಸಂಖ್ಯೆ | |
| 2. | ಪೂರ್ಣ ವಿಳಾಸ | |
| 3. | ಜಾತಿ (ಎಸ್.ಸಿ./ಎಸ್.ಟಿ./ಸಾಮಾನ್ಯ) | |
| 4. | ಕೆರೆಯ ಹೆಸರು ಮತ್ತು ತಾಲ್ಲೂಕು | |
| 5. | ವಿಲೇವಾರಿ ವಿಧಾನ | |
| 6. | ಜಲವಿಸ್ತೀರ್ಣ (ಹೆ.ಗಳಲ್ಲಿ) | |
| 7. | ಅಚ್ಚುಕಟ್ಟು (ಹೆ.ಗಳಲ್ಲಿ) | |
| 8. | ಉಪಯುಕ್ತತಾ ಜಲವಿಸ್ತೀರ್ಣ (ಹೆ.ಗಳಲ್ಲಿ) | |
| 9. | ಗುತ್ತಿಗೆ ಅವಧಿ (ನವೀಕರಣ ಮತ್ತು ಆದೇಶ ಪ್ರತಿ ಲಗತ್ತಿಸುವುದು) | |
| 10. | ಅ. ಪ್ರಸಕ್ತ ಸಾಲಿನ ಗುತ್ತಿಗೆ ಮೊತ್ತ ಪಾವತಿಸಿರುವ ವಿವರ<br>ಆ. ಖರೀದಿಸುವ ಬಲಿತ ಮೀನುಮರಿಗಳ ಸಂಖ್ಯೆ ಮತ್ತು ಮೊತ್ತ (ಕನಿಷ್ಟ 4000 ಸಂಖ್ಯೆ/ಹೆ)<br>ಇ. ಖರೀದಿಸುವ ಮೀನು ಆಹಾರ ಪ್ರಮಾಣ ಮತ್ತು ಮೊತ್ತ<br>ಕನಿಷ್ಟ ಕೆಜಿ ಆಹಾರ/ಹೆ.ಪ್ರಮಾಣದಲ್ಲಿ)<br>ಒಟ್ಟು | ಮೊತ್ತ :<br>ಜಿ.ಆರ್. ಸಂಖ್ಯೆ :<br>ದಿನಾಂಕ : |
| 11. | ಹಿಂದಿನ ಸಾಲಿನಲ್ಲಿ ಬಿತ್ತನೆ ಮಾಡಿದ ಮೀನುಮರಿಗಳ ಸಂಖ್ಯೆ ಮತ್ತು ಹಿಡುವಳಿ ಮಾಡಿದ ವಿವರ | |

ದಿನಾಂಕ:

ಸ್ಥಳ:

ಫಲಾನುಭವಿಯ ಸಹಿ

**ಶಿಫಾರಸ್ಸು ಪತ್ರ**

ಶ್ರೀ/ಶ್ರೀಮತಿ ---------------- ರವರ ಅರ್ಜಿಯನ್ನು ಎಲ್ಲಾ ದಾಖಲಾತಿಗಳೊಂದಿಗೆ ದಿನಾಂಕ:-------- ರಂದು ಸ್ವೀಕರಿಸಿದ್ದು, ಕೆರೆಯ ಅರೆ ತೀವ್ರ ಮೀನು ಕೃಷಿಗೆ ಯೋಗ್ಯವಾಗಿದ್ದು ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿದೆ.

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2).

## ಅನುಮತಿ ಪತ್ರ

## ಅನುಬಂಧ–2

ದಿನಾಂಕ:-------------ರಂದು ಮೀನುಗಾರಿಕೆ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆಳಕಂಡವರನ್ನು "ಮತ್ಸ್ಯ ಕೃಷಿ ಆಶಾಕಿರಣ" ಯೋಜನೆಯ ಫಲಾನುಭವಿಯೆಂದು ಆಯ್ಕೆ ಮಾಡಲಾಗಿದೆ.

| ಕ್ರ. ಸಂ. | ಹೆಸರು ಮತ್ತು ವಿಳಾಸ | ಕೆರೆಯ ಹೆಸರು | ತಾಲ್ಲೂಕು |
|---|---|---|---|
| | | | |
| | | | |

1. ಹೆಸರು :
2. ವಿಳಾಸ :
3. ಕೆರೆಯ ಹೆಸರು :
4. ತಾಲ್ಲೂಕು :

ಸದರಿಯವರು ನಿಯಮಾನುಸಾರ ಮೇಲಿನ ಕೆರೆಯಲ್ಲಿ "ಮತ್ಸ್ಯ ಕೃಷಿ ಆಶಾಕಿರಣ" ಯೋಜನೆಯಲ್ಲಿ ಅರೆ ತೀವ್ರ ಮಾದರಿಯಲ್ಲಿ ಮೀನು ಕೃಷಿ ಕೈಗೊಳ್ಳಲು ತಿಳಿಸಲಾಗಿದೆ.

ಜಿಲ್ಲಾ ಮೀನುಗಾರಿಕೆ ಅಧಿಕಾರಿ

ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

ಖರೀದಿಸಿದ ಹೂಡಿಕೆಗಳ ವಿವರ

ಅನುಬಂಧ-3

| | | |
|---|---|---|
| 1 | ಖರೀದಿಸಿದ ಬಲಿತ, ಬಿತ್ತನೆ ಮೀನುಮರಿ ಸಂಖ್ಯೆ ಮತ್ತು ಮೊತ್ತ | |
| | ಅ. ಕಾಟ್ಲ<br>ಆ. ರೋಹು<br>ಇ. ಸಾಮಾನ್ಯಗೆಂಡೆ | |
| 2 | ಕಂತಿನಲ್ಲಿ ಖರೀದಿಸಿದ ಒಟ್ಟು ಮೀನು ಆಹಾರ ಪ್ರಮಾಣ ಮತ್ತು ಮೊತ್ತ | |
| 3 | ಒಟ್ಟು ಹೂಡಿಕೆ ವೆಚ್ಚ | |
| 4 | ಮೀನುಮರಿ ಖರೀದಿ ಹಾಗೂ ಮೀನು ಆಹಾರ ಖರೀದಿಯ ಮೂಲ ಬಿಲ್ಲುಗಳು ಹಾಗೂ ದಾಸ್ತಾನು ಪೋಟೋಗಳು | |

ದಿನಾಂಕ:

ಸ್ಥಳ: ಫಲಾನುಭವಿಯ ಸಹಿ

ದೃಢೀಕರಣ

ಮೇಲಿನ ದಾಖಲು ಪತ್ರಗಳನ್ನು ಹಾಗೂ ಕೆರೆಯಲ್ಲಿ ಮೀನು ಕೃಷಿಯನ್ನು ಖುದ್ದಾಗಿ ಪರಿಶೀಲಿಸಲಾಗಿದ್ದು, ಅರ್ಜಿದಾರರು ----- ಕಂತಿನಲ್ಲಿ ಈ ಕೆಳಕಂಡ ಸಹಾಯಧನಕ್ಕೆ ಅರ್ಹರಾಗಿದ್ದು, ಸಹಾಯಧನ ಮಂಜೂರು ಮಾಡಬಹುದು.

ಮೀನುಮರಿ ಖರೀದಿಗೆ ಸಹಾಯಧನ :

ಮೀನುಮರಿ ಆಹಾರ ಸಹಾಯಧನ :

ಒಟ್ಟು ರೂ.

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2),